## All India Radio: Bangalore
## National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**23.10.2026  7.35  pm**

**<>><><*><><<>**

ಮುಖ್ಯಾಂಶಗಳು

**<><*<><>*><>**

೧. ಕೇಂದ್ರ - ರಾಜ್ಯ ಸರ್ಕಾರಗಳ ಜಂಟಿ ಪ್ರಯತ್ನದಿಂದ ಪ್ರಗತಿಪಥದಲ್ಲಿ ಛತ್ತೀಸ್‌ಗಢ ಮುನ್ನಡೆ- ರಾಷ್ಟ್ರಪತಿ ದ್ರೌಪದಿ ಮುರ್ಮು

೨. ಭಾರತ -ಚೀನಾ ನಡುವೆ ನಿಯಂತ್ರಣ ರೇಖೆ ಕುರಿತು ರಾಜತಾಂತ್ರಿಕ ಸಮಾಲೋಚನೆ ಮುಂದುವರಿಕೆ; ವಿದೇಶಾಂಗ ಸಚಿವಾಲಯದ ಸ್ಪಷ್ಟನೆ

೩. ಬಿಕ್ಕಟ್ಟಿನ ಸಂದರ್ಭಗಳಲ್ಲಿ ವಿದೇಶಗಳಲ್ಲಿರುವ ಭಾರತೀಯರ ಸುರಕ್ಷತೆಗೆ ಆದ್ಯತೆ ; ಕೇಂದ್ರ ಸಚಿವ ಪಿಯೂಷ್ ಗೋಯಲ್

೪. ಅಜರ್‌ಬೈಜಾನ್ ಅಧ್ಯಕ್ಷರೊಂದಿಗೆ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಮಾತುಕತೆ; ದ್ವಿಪಕ್ಷೀಯ ಸಹಕಾರದ ವೃದ್ಧಿಗೆ ಸಹಮತ

೫. ಏಷ್ಯನ್ ಪ್ಯಾರಾ ಕ್ರೀಡಾಕೂಟ; ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ ಭಾರತದ ಸುಮಿತ್ ಅಂತಿಮ್‌ಗೆ ಸ್ವರ್ಣ ಪದಕ

**<><*<><>*><>**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಪ್ರಯತ್ನದಿಂದ ಛತ್ತೀಸ್‌ಗಢ ರಾಜ್ಯ ನಕ್ಸಲ್ ಪಿಡುಗಿನಿಂದ ಸಂಪೂರ್ಣವಾಗಿ ಮುಕ್ತಗೊಂಡು ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಿಳಿಸಿದ್ದಾರೆ. ಜಗದಲ್‌ಪುರದಲ್ಲಿ ನಡೆದ ಬಸ್ತಾರ್ ದಸರಾ ಉತ್ಸವ ಉದ್ದೇಶಿಸಿ ಮಾತನಾಡಿದ ಅವರು, ಬುಡಕಟ್ಟು ಉದ್ಯಮಿಗಳಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸುವ ಮತ್ತು ಅವರನ್ನು ಮಾರುಕಟ್ಟೆಗಳೊಂದಿಗೆ ಜೋಡಿಸುವ ಪ್ರಯತ್ನಗಳನ್ನು ಶ್ಲಾಘಿಸಿದರು.  ಸಮಾನ ಅಭಿವೃದ್ಧಿಯ ಮೂಲಕ ೨೦೪೭ರ ವೇಳೆಗೆ ವಿಕಸಿತ ಭಾರತದ ಗುರಿಯನ್ನು ಸಾಧಿಸಲು ಈ ಪ್ರಯತ್ನಗಳು ನೆರವಾಗಲಿವೆ ಎಂದು ಅಭಿಪ್ರಾಯಪಟ್ಟರು.  ಇದೇ ವೇಳೆ ತಮ್ಮ ಪ್ರದೇಶದ ಅರಣ್ಯಗಳು ಮತ್ತು ಬೆಟ್ಟಗಳನ್ನು ಸಂರಕ್ಷಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ ಅವರು, ಈ ನೈಸರ್ಗಿಕ ಸಂಪನ್ಮೂಲಗಳು ಜಲ ಮತ್ತು ಆಹಾರವನ್ನು ಒದಗಿಸುವುದರಿಂದ ಪ್ರಕೃತಿಯನ್ನು ರಕ್ಷಿಸುವುದು ಪ್ರತಿಯೊಬ್ಬರ ಪ್ರಾಥಮಿಕ ಕರ್ತವ್ಯವಾಗಿದೆ ಎಂದು ಪ್ರತಿಪಾದಿಸಿದರು.

**<><*<><>*><>**

ವಾಸ್ತವ ನಿಯಂತ್ರಣ ರೇಖೆಯ ಬಳಿ ಭಿನ್ನಾಭಿಪ್ರಾಯಗಳನ್ನು ತಡೆಯಲು ಹಾಗೂ ಸಮಸ್ಯೆಯನ್ನು ಬಗೆಹರಿಸಲು ಭಾರತ ಮತ್ತು ಚೀನಾ ರಾಜತಾಂತ್ರಿಕ ಮತ್ತು ಸೇನಾಮಟ್ಟದ ಸಮಾಲೋಚನೆಗಳನ್ನು ಮುಂದುವರಿಸಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.  ನವದೆಹಲಿಯಲ್ಲಿಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಚೀನಾ ಪಡೆಗಳು ನಿಗದಿತ ಗಸ್ತು ನಿಯಮಗಳನ್ನು ಉಲ್ಲಂಘಿಸಿದಾಗ ಗಡಿ ಭಾಗದಲ್ಲಿ ಪರಿಸ್ಥಿತಿ

ಬಿಗಡಾಯಿಸುತ್ತದೆ. ಗಡಿ ನಿರ್ವಹಣೆಯನ್ನು ಸುಧಾರಿಸಲು ವಾಸ್ತವ ನಿಯಂತ್ರಣ ರೇಖೆ ಕುರಿತ ತಿಳುವಳಿಕೆಯನ್ನು ಹೆಚ್ಚಿಸಲು ಎರಡೂ ರಾಷ್ಟ್ರಗಳು ಸಮ್ಮತಿಸಿವೆ ಎಂದು ಹೇಳಿದರು. ಇದೇ ವೇಳೆ, ಇರಾನ್‌ಗೆ ಜೀವ ರಕ್ಷಕ ಔಷಧಗಳನ್ನು ಪೂರೈಸಲು ಭಾರತ ನಿರಂತರವಾಗಿ ನೆರವಾಗುತ್ತಿದೆ ಎಂದು ವಿದೇಶಾಂಗ ವಕ್ತಾರರು ಸ್ಪಷ್ಟಪಡಿಸಿದ್ದಾರೆ. ಪ್ರಾದೇಶಿಕ ಸಂಘರ್ಷಗಳಿಂದ ವಿಮಾನ ಸಂಪರ್ಕಕ್ಕೆ ಸವಾಲುಗಳು ಎದುರಾಗಿದ್ದರೂ, ಮಾನವೀಯ ಆಧಾರದ ಮೇಲೆ ಔಷಧಗಳ ಸಾಗಣೆಯನ್ನು ಸುಗಮಗೊಳಿಸಲು ಇರಾನ್ ಅಧಿಕಾರಿಗಳೊಂದಿಗೆ ಸತತ ಸಂವಹನ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

**<><*<><>*><>**

ಭಾರತೀಯ ನೌಕಾಪಡೆ ಮತ್ತು ರಷ್ಯನ್ ಫೆಡರೇಶನ್ ನೌಕಾಪಡೆ ನಡುವಿನ ’ಇಂದ್ರಾ ೨೦೨೬’ ದ್ವಿಪಕ್ಷೀಯ ನೌಕಾ ಸಮರಾಭ್ಯಾಸ ಮುಕ್ತಾಯದ ಬೆನ್ನಲ್ಲೇ, ಭಾರತೀಯ ನೌಕಾಪಡೆಯ ’ಐಎನ್‌ಎಸ್ ಸಹ್ಯಾದ್ರಿ’ ಈ ತಿಂಗಳ ೨೦ರಂದು ರಷ್ಯಾದ ವ್ಲಾಡಿವೋಸ್ಟಾಕ್ ಬಂದರಿನಿಂದ ಹೊರಟಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ನೌಕಾ ಸಮರಾಭ್ಯಾಸವನ್ನು ಬಂದರು ಹಂತ ಮತ್ತು ಸಮುದ್ರ ಹಂತ ಎಂಬ ಎರಡು ಹಂತಗಳಲ್ಲಿ ನಡೆಸಲಾಗಿತ್ತು. ಬಂದರು ಹಂತದಲ್ಲಿ ಉನ್ನತ ನಾಯಕರ ಸಮಾಲೋಚನೆಗಳು, ನೌಕಾಪಡೆಯ ಹಡಗುಗಳ ಪರಸ್ಪರ ಭೇಟಿ, ವಿಷಯ ತಜ್ಞರ ವಿಚಾರ ವಿನಿಮಯ, ಕಾರ್ಯಾಚರಣೆಯ ಸಮನ್ವಯ ಚಟುವಟಿಕೆಗಳು, ಕ್ರೀಡಾಕೂಟಗಳು ಮತ್ತು ಸಾಂಸ್ಕೃತಿಕ ವಿನಿಮಯಗಳು ನಡೆದವು. ಇನ್ನು ಸಮುದ್ರ ಹಂತದಲ್ಲಿ ಎರಡೂ ದೇಶಗಳ ನೌಕಾಪಡೆಗಳು ಸಮನ್ವಯದೊಂದಿಗೆ ಹಡಗುಗಳ ಪಥಸಂಚಲನ, ಏಕೀಕೃತ ಸಂವಹನ, ಹೆಲಿಕಾಪ್ಟರ್ ಕಾರ್ಯಾಚರಣೆಗಳು ಹಾಗೂ ವೈದ್ಯಕೀಯ ತುರ್ತು ಸ್ಥಳಾಂತರದ ಅಭ್ಯಾಸಗಳನ್ನು ಕೈಗೊಂಡವು.

**<><*<><>*><>**

ಜಾಗತಿಕ ಬಿಕ್ಕಟ್ಟುಗಳು ಹಾಗೂ ತುರ್ತು ಪರಿಸ್ಥಿತಿಗಳಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿ ಸಿಲುಕಿರುವ ತನ್ನ ನಾಗರಿಕರ ಸುರಕ್ಷತೆ ಮತ್ತು ಕ್ಷೇಮವನ್ನು ಭಾರತ ನಿರಂತರವಾಗಿ ಖಚಿತಪಡಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಉದ್ಯಮ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ತುರ್ತು ಸಂದರ್ಭಗಳಲ್ಲಿ ಅನೇಕ ದೇಶಗಳು ಕೇವಲ ಪ್ರಯಾಣದ ಕುರಿತು ಎಚ್ಚರಿಕೆ ನಿರ್ದೇಶನಗಳನ್ನು ಹೊರಡಿಸಿದರೆ, ಭಾರತ ಅಗತ್ಯವಿದ್ದಾಗ ತನ್ನ ದೇಶವಾಸಿಗಳನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲು ದಿಟ್ಟ ಹೆಜ್ಜೆಗಳನ್ನು ಇಟ್ಟಿದೆ. ಭಾರತೀಯರಷ್ಟೇ ಅಲ್ಲದೆ ಇತರ ದೇಶಗಳ ನಾಗರಿಕರನ್ನೂ ಸುರಕ್ಷಿತವಾಗಿ ಸ್ಥಳಾಂತರಿಸಲು ಭಾರತ ನೆರವಾಗಿದೆ ಎಂದು ಹೇಳಿದರು. ಉಕ್ರೇನ್ ಯುದ್ಧದ ಸಮಯದಲ್ಲಿ ಸ್ಥಳಾಂತರ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ವೈಯಕ್ತಿಕವಾಗಿ ವಹಿಸಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿ, ನವದೆಹಲಿಯಲ್ಲಿ ವಿಶೇಷ ತಂಡವನ್ನು ರಚಿಸಿ ಕಾರ್ಯಾಚರಣೆಯ ಸಮನ್ವಯ ಮತ್ತು ಮಾರ್ಗದರ್ಶನ ನೀಡಿದ್ದರು ಎಂದು ಸಚಿವರು ತಿಳಿಸಿದರು. ಕಾರ್ಯಾಚರಣೆಯನ್ನು ಸುಗಮಗೊಳಿಸಲು ನಾಲ್ವರು ಹಿರಿಯ ಸಚಿವರನ್ನು ನೆರೆಹೊರೆಯ ದೇಶಗಳಿಗೆ ನಿಯೋಜಿಸಲಾಗಿತ್ತು. ಸವಾಲಿನ ಪರಿಸ್ಥಿತಿಗಳಲ್ಲಿ ತನ್ನ ನಾಗರಿಕರನ್ನು ರಕ್ಷಿಸುವ ಮತ್ತು ಸುರಕ್ಷಿತವಾಗಿ ಮನೆಗೆ ಕರೆತರುವ ಭಾರತದ ಬದ್ಧತೆಯನ್ನು ಈ ಪ್ರಯತ್ನಗಳು ಬಿಂಬಿಸುತ್ತವೆ ಎಂದು ಸಚಿವರು ಬಣ್ಣಿಸಿದರು.

**<><*<><>*><>**

ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಇಂದು ಬಾಕು ನಗರದಲ್ಲಿ ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಅಲಿಯೇವ್ ಅವರನ್ನು ಭೇಟಿಯಾದರು. ಈ ವೇಳೆ, ಪ್ರಮುಖ

ಪ್ರಾದೇಶಿಕ ಹಾಗೂ ಜಾಗತಿಕ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಲಾಯಿತು. ಭಾರತ ಮತ್ತು ಅಜರ್‌ಬೈಜಾನ್ ಎರಡೂ ಸ್ವತಂತ್ರ ಚಿಂತನೆಯ ರಾಷ್ಟ್ರಗಳಾಗಿದ್ದು, ಪ್ರಮುಖ ವಿಷಯಗಳಲ್ಲಿ ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ ಎಂದು ಸಚಿವ ಡಾ.ಎಸ್.ಜೈಶಂಕರ್ ಹೇಳಿದರು. ದ್ವಿಪಕ್ಷೀಯ ಬಾಂಧವ್ಯದ ವಿವಿಧ ಆಯಾಮಗಳ ಕುರಿತು ಫಲಪ್ರದ ಮಾತುಕತೆ ನಡೆಸಲಾಗಿದೆ. ಉಭಯ ರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಹಾಗೂ ಪರಸ್ಪರ ಜನರ ನಡುವಿನ ಸುದೀರ್ಘ ಬಾಂಧವ್ಯದ ಇತಿಹಾಸವಿದ್ದು, ಪರಸ್ಪರರ ಮೌಲ್ಯಗಳನ್ನು ಗೌರವಿಸುತ್ತವೆ. ಇದು ಆಧುನಿಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಸಹಕಾರಿಯಾಗಿದೆ ಎಂದು ಸಚಿವರು ಅಭಿಪ್ರಾಯಪಟ್ಟರು. ಇದಕ್ಕೂ ಮುನ್ನ ಸಚಿವ ಡಾ.ಜೈಶಂಕರ್ ಅಜರ್‌ಬೈಜಾನ್ ವಿದೇಶಾಂಗ ಸಚಿವ ಜೇಹುನ್ ಬೈರಾಮೋವ್ ಅವರೊಂದಿಗೂ ದ್ವಿಪಕ್ಷೀಯ ಸಮಾಲೋಚನೆ ನಡೆಸಿದರು. ಈ ವೇಳೆ ವ್ಯಾಪಾರ, ಹೂಡಿಕೆ ಮತ್ತು ಇಂಧನ ಕ್ಷೇತ್ರಗಳನ್ನೊಳಗೊಂಡ ಆರ್ಥಿಕ ಸಹಕಾರದ ಕುರಿತು ಮಾತನಾಡಿದರು.

**<><*<><>*><>**

ಭಾರತದ ಅಕ್ಕಿ ಉದ್ಯಮ ವಲಯದಲ್ಲಿ ಮೌಲ್ಯವರ್ಧನೆ, ಸಂಶೋಧನೆ ಮತ್ತು ತಾಂತ್ರಿಕ ನಾವೀನ್ಯತೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಕೇಂದ್ರ ಆಹಾರ ಸಂಸ್ಕರಣಾ ಉದ್ಯಮಗಳ ಸಚಿವ ಚಿರಾಗ್ ಪಾಸ್ವಾನ್ ಕರೆ ನೀಡಿದ್ದಾರೆ. ನವದೆಹಲಿಯಲ್ಲಿ ನಡೆದ ಭಾರತ ಅಂತಾರಾಷ್ಟ್ರೀಯ ಅಕ್ಕಿ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೇವಲ ಹೆಚ್ಚಿನ ಉತ್ಪಾದನಾ ಪ್ರಮಾಣಕ್ಕೆ ಸೀಮಿತವಾಗದೆ, ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸಲು ಉತ್ಪನ್ನಗಳ ಗುಣಮಟ್ಟ ಸುಧಾರಣೆಯತ್ತ ಗಮನಹರಿಸಬೇಕು ಎಂದು ತಿಳಿಸಿದರು. ಜಾಗತಿಕ ಅಕ್ಕಿ ವ್ಯಾಪಾರದಲ್ಲಿ ಭಾರತ, ಶೇಕಡಾ ೪೦ ರಷ್ಟು ಸಿಂಹಪಾಲು ಹೊಂದಿದೆ ಎಂದು ಉಲ್ಲೇಖಿಸಿದ ಅವರು, ಉತ್ತಮ ಗುಣಮಟ್ಟ, ಸಂಶೋಧನೆ ಹಾಗೂ ಇತರ ದೇಶಗಳೊಂದಿಗೆ ತಂತ್ರಜ್ಞಾನ ವಿನಿಮಯದ ಮೂಲಕ ರಫ್ತು ಮಾರುಕಟ್ಟೆಯನ್ನು ಮತ್ತಷ್ಟು ಬಲಪಡಿಸುವುದು ಮುಖ್ಯವಾಗಿದೆ ಎಂದು ಹೇಳಿದರು.

**<><*<><>*><>**

ಬದಲಾಗುತ್ತಿರುವ ಭದ್ರತಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸೌದಿ ಅರೇಬಿಯಾದ ನಾಲ್ಕು ನಗರಗಳಿಗೆ ಪ್ರಯಾಣ ಸೇವೆ ಒದಗಿಸುವ ತನ್ನ ವಿಮಾನಗಳ ರದ್ದತಿಯನ್ನು ಖಾಸಗಿ ವಿಮಾನಯಾನ ಸಂಸ್ಥೆ - ಇಂಡಿಗೋ ವಿಸ್ತರಿಸಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಇಂಡಿಗೋ, ರಿಯಾದ್ ನಗರಕ್ಕೆ ಹಾಗೂ ಅಲ್ಲಿಂದ ಹೊರಡುವ ವಿಮಾನ ಸೇವೆಗಳನ್ನು ಇದೇ ೩೧ರವರೆಗೆ ರದ್ದುಗೊಳಿಸಲಾಗಿದೆ ಎಂದು ತಿಳಿಸಿದೆ. ಜೆಡ್ಡಾ, ದಮ್ಮಾಮ್ ಮತ್ತು ಮದೀನಾ ನಗರಗಳ ವಿಮಾನ ಸೇವೆಗಳು ಈ ತಿಂಗಳ ೨೭ರವರೆಗೆ ರದ್ದಾಗಿರಲಿವೆ ಎಂದು ಸ್ಪಷ್ಟಪಡಿಸಿದೆ. ಗ್ರಾಹಕರು ಮತ್ತು ಸಿಬ್ಬಂದಿಯ ಸುರಕ್ಷತೆ ಹಾಗೂ ಕ್ಷೇಮಕ್ಕೆ ತಮ್ಮ ಸಂಸ್ಥೆಯು ಆದ್ಯತೆ ನೀಡುತ್ತದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

**<><*<><>*><>**

ಸಿಂಗಾಪುರ್‌ನಲ್ಲಿ ನಡೆಯುತ್ತಿರುವ 'ನಮಸ್ತೆ ಭಾರತ್ ೨೦೨೬' ಪ್ರದರ್ಶನದಲ್ಲಿ ಮಹಾರಾಷ್ಟ್ರದ ೫೦ ಮಹಿಳಾ ಉದ್ಯಮಿಗಳ ನಿಯೋಗ ಭಾಗವಹಿಸಿದೆ. ಭಾರತದ ಕರಕುಶಲ ವಸ್ತುಗಳು, ಜವಳಿ, ಆಭರಣ, ಸಾಂಪ್ರದಾಯಿಕ ಆಹಾರ ಮತ್ತು ಸಿರಿಧಾನ್ಯ ಉತ್ಪನ್ನಗಳನ್ನು ಪ್ರದರ್ಶಿಸಲು ಈ ಮೇಳ ಆಯೋಜಿಸಲಾಗಿದೆ. ಉದ್ಯಮಿಗಳನ್ನು ಸ್ವಾಗತಿಸಿದ ಸಿಂಗಾಪುರ್‌ನಲ್ಲಿರುವ ಭಾರತದ ಹೈಕಮಿಷನರ್ ಶಿಲ್ಪಾಕ್ ಅಂಬುಲೆ, ವಿಶಾಲ ಏಷ್ಯಾ ಮಾರುಕಟ್ಟೆಯಲ್ಲಿ ಭಾರತೀಯ ಉತ್ಪನ್ನಗಳಿಗೆ ಸಿಂಗಾಪುರ್ ಉತ್ತಮ ವೇದಿಕೆಯಾಗಿದೆ ಎಂದರು.

<><*<><>*><>

ಜಪಾನ್‌ನ ನಗೋಯಾದಲ್ಲಿ ನಡೆಯುತ್ತಿರುವ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ವಿಶ್ವ ಚಾಂಪಿಯನ್ ಭಾರತದ ಸುಮಿತ್ ಅಂತಿಲ್ ಪುರುಷರ ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ ೭೨.೯೬ ಮೀಟರ್ ಎಸೆದು ಚಿನ್ನದ ಪದಕ ಗೆದ್ದಿದ್ದಾರೆ. ಇದೇ ಸ್ಪರ್ಧೆಯಲ್ಲಿ ಮಹೇಂದ್ರ ಗುರ್ಜರ್ ಬೆಳ್ಳಿ ಹಾಗೂ ಸಂದೀಪ್ ಸರ್ಗಾರ್ ಕಂಚಿನ ಪದಕ ಪಡೆದಿದ್ದು, ಭಾರತ ಮೂರೂ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಇನ್ನುಳಿದಂತೆ ಕ್ಲಬ್ ಥ್ರೋನಲ್ಲಿ ಪ್ರಣವ್ ಸೂರ್ಮಾ ಕೂಟದ ದಾಖಲೆಯೊಂದಿಗೆ ಚಿನ್ನ ಹಾಗೂ ಧರಂಬೀರ್ ಕಂಚಿನ ಪದಕ ಗೆದ್ದಿದ್ದಾರೆ. ಓಟದ ಸ್ಪರ್ಧೆಯಲ್ಲಿ ಸಂದೀಪ್ ೧೦೦ ಮೀಟರ್ ಓಟದಲ್ಲಿ ಕಂಚು ಪದಕ ಪಡೆದರೆ, ಬ್ಯಾಡ್ಮಿಂಟನ್ ಮಹಿಳೆಯರ ಡಬಲ್ಸ್‌ನಲ್ಲಿ ತುಳಸಿಮತಿ ಮುರುಗೇಶನ್ ಹಾಗೂ ಮಾನಸಿ ಜೋಶಿ ಜೋಡಿ ಸ್ವರ್ಣ ಪದಕ ಮುಡಿಗೇರಿಸಿಕೊಂಡಿದೆ. ತುಳಸಿಮತಿ ಮಿಶ್ರ ಡಬಲ್ಸ್‌ನಲ್ಲೂ ಬೆಳ್ಳಿ ಪದಕ ಗೆದ್ದಿದ್ದಾರೆ.

<><*<> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>